**O.S. 114-18 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 15.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ S R A, ವಕೀಲರಿಂದಃ**

5. ಪಿ ಡಿ ಶಿರೂರ, ಆರ್ ಜೆ ಹಿರೇಮಠ, ಎಸ್ ಜೆ ಹಿರೇಮಠ ರವರು ಬಿಲ್ಡರ ಅಲ್ಲ ಅಂದರೆ ಸರಿಯಲ್ಲ. ಪ್ರತಿವಾದಿ 1 ಹಾಗೂ 2 ರವರು ಕಟ್ಟಡ ಪೂರ್ಣವಾದ ನಂತರ ಖರೀದಿ ಪತ್ರ ಮಾಡಿಕೊಡುತ್ತೇವೆ ಅಂತಾ ಹೇಳಿದರು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 4 ಲಕ್ಷ ರೂ. ಬಾಕಿ ಹಣವನ್ನು ಪಡೆದುಕೊಂಡು, ಖರೀದಿ ಪತ್ರ ಬರೆದುಕೊಡುತ್ತೇವೆ ಅಂತಾ ಹೇಳಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳು ಹೇಳಿದರು ಅಂತಾ ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಅಂದರೆ ಸರಿ. ಪ್ರತಿವಾದಿ 1 ಹಾಗೂ 2 ರವರಿಗೆ ಮಾರಾಟ ಮಾಡುವ ಇಚ್ಛೆ ಇರಲಿಲ್ಲ, ನಮಗೆ ಖರೀದಿ ಮಾಡುವ ಇಚ್ಛೆ ಇರಲಿಲ್ಲ ಅಂದರೆ ಸರಿಯಲ್ಲ. ಪ್ರ-ತಿವಾದಿ 1 ಹಾಗೂ 2 ರವರ ಜೊತೆಗೆ ಕರಾರು ಆಗಿದೆ ಅಂತಾ ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ. 11 ಲಕ್ಷ ರೂ. ಕೊಟ್ಟ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ನನ್ನ ಖಾತೆಯಿಂದ 11 ಲಕ್ಷ ರೂ. ಹೋದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ, ನನ್ನ ಪರವಾಗಿ ನನ್ನ ತಂದೆ ಕೊಟ್ಟಿದ್ದಾರೆ. ನನ್ನ ಪರವಾಗಿ ನನ್ನ ತಂದೆ ಹಣ ಕೊಟ್ಟಿದ್ದಾರೆ ಎಂದು ವಾದ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. ದಾವೆ ಸಲ್ಲಿಸುವಾಗ ಈ ತರಹ ಮಾಹಿತಿ ವಕೀಲರಿಗೆ ಹೇಳಿಲ್ಲ ಅಂದರೆ ಸರಿ. ನನ್ನ ತಂದೆ ಕೊಟ್ಟ ಹಣಕ್ಕೂ ಹಾಗೂ ಈ ದಾವೆ ವ್ಯವಹಾರಕ್ಕೂ ಸಂಬಂಧವಿಲ್ಲ ಅಂದರೆ, ನಮ್ಮ ತಂದೆ ಸಾಕ್ಷಿ ಮಾಡಿಸುತ್ತೇನೆ ಅಂತಾ ನುಡಿಯುತ್ತಾರೆ. ನಮ್ಮ ತಂದೆ ಹಣ ಕೊಟ್ಟ ಪತ್ರ ಬರೆದಿಲ್ಲ ಹಾಗೂ ನೋಟಿಸು ನೀಡಿಲ್ಲ ಮತ್ತು ಯಾವುದೇ ದಾವೆ ಸಲ್ಲಿಸಿಲ್ಲ. ನಮ್ಮ ಹಾಗೂ ಪ್ರತಿವಾಗಳ ಮಧ್ಯೆ ಮೌಖಿಕ ಕರಾರುವಾಗಿದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆ 11 ಲಕ್ಷ ರೂ. ಕೊಟ್ಟ ಬಗ್ಗೆ ಹಾಗೂ ಈ ದಾವೆಗೆ ಸಂಬಂಧ ಇದೆ ಅಂತಾ ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ನಾನು ಮೂಲ ರಶೀದಿ ಕಳೆದುಕೊಂಡಿದ್ದೇನೆ, ಅದರ ಜರಾಕ್ಸ ಪ್ರತಿ ಹಾಜರಪಡಿಸಿದ್ದೇನೆ. ಸದರಿ ರಶೀದಿ ನಿಶಾನೆಗೊಳಪಟ್ಟಿಲ್ಲ ಅಂದರೆ ಸರಿ.

**O.S. 114-18** **PW : 1**

ನಾನು 2011 ರಲ್ಲಿ ನನ್ನ ತಂದೆ 4 ಲಕ್ಷ ರೂ. ಹಾಗೂ 1 ಲಕ್ಷ ರೂ. ಚೆಕ್ ಮೂಲಕ ಕೊಟ್ಟಿದ್ದಾರೆ. ಏಪ್ರಿಲ್ -2012 ರಲ್ಲಿ 6 ಲಕ್ಷ ರೂ. ಚೆಕ್ ಮೂಲಕ ಕೊಟ್ಟಿದ್ದಾರೆ. ನಮ್ಮ ತಂದೆ ಖರೀದಿಗೋಸ್ಕರ ಸದರಿ ಹಣವನ್ನು ಕೊಟ್ಟಿಲ್ಲ ಅಂದರೆ ಸರಿಯಲ್ಲ. ಮನೆ ಖರೀದಿಗೆ ಕೊಟ್ಟಿದ್ದಾರೆ ಅಂತಾ ತೋರಿಸಲು ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ.

6. ನಮಗೆ ಮಾರಾಟ ಮಾಡುತ್ತೇವೆ ಅಂತಾ ಹೇಳಲಾದ ಮನೆ ಎರಡು ಸಲ ಮಾರಾಟವಾಗಿದೆ. ಸದರಿ ಮನೆಯೂ ಜಹಗೀರದಾರ ರವರ ಹೆಸರಿನಲ್ಲಿದೆ. ನಾವು ದಾವೆ ಸಲ್ಲಿಸಿದಾಗ 1 ನೇ ಮಾರಾಟವಾಗಿತ್ತು. ಅದು ಯಾರ ಹೆಸರಿನಲ್ಲಿತ್ತು ಅಂತಾ ಗೊತ್ತಿಲ್ಲ. ಮಾರಾಟವಾದ ವಿಷಯ ಗೊತ್ತಾದ ನಂತರ ಈ ದಾವೆ ಸಲ್ಲಿಸಿದ್ದೇವೆ. 2018 ರಲ್ಲಿ ಖರೀದಿ ಮಾಡಿದವರನ್ನು ಪಕ್ಷಗಾರರನಾನಗಿ ಮಾಡಿಲ್ಲ ಅಂದರೆ ಗೊತ್ತಿಲ್ಲ. 2016 ರಲ್ಲಿ ಸದರಿ ಮನೆ ಮಾರಾಟವಾಗಿದೆ ಅಂದರೆ ಸರಿ. 2 ನೇ ಬಾರಿಗೆ ಮಾರಾಟವಾಗಿದ್ದು, ದಾವೆ ಸಲ್ಲಿಸುವ ಪೂರ್ವದಲ್ಲಿ ಅಂದರೆ ಸರಿ. ನಮಗೆ ಹೇಳಲಾರದೇ ಮಾರಾಟ ಮಾಡಿದ್ದಾರೆ. ನಮ್ಮ ಜೊತೆಗೆ ಯಾವುದೇ ಕರಾರುವಾಗದ ಕಾರಣ, ಹೆಳುವ ಅವಶ್ಯಕತೆ ಇಲ್ಲ ಅಂದರೆ ಸರಿಯಲ್ಲ. ಖರೀದಿದಾರರ ಕಬ್ಜೆಯಲ್ಲಿ ಆಸ್ತಿ ಇದೆ ಅಂದರೆ ಸರಿ. ಪ್ರತಿವಾದಿಗಳಿಗೆ ತೊಂದರೆ ಕೊಡಲು ನಮ್ಮ ಬಳಿ ಯಾವುದೇ ದಾಖ್ಲೆ ಇಲ್ಲದಿದ್ದರೂ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮಗೂ ಹಾಗೂ ಪ್ರತಿವಾದಿಗಳಿಗೂ ಯಾವುದೇ ಮೌಖಿಕ ಕರಾರುವಾಗಿಲ್ಲ ಅಂದರೆ ಸರಿಯಲ್ಲ. ಮೌಖಿಕ ಕರಾರಿನ ಮೇರೆಗೆ ನಮ್ಮ ತಂದೆ ಮೂಲಕ ಹಣ ಕೊಟ್ಟಿದ್ದಾರೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಬಳಿ ಯಾವುದೇ ದಾಖಲೆ ಇಲ್ಲದ ಕಾರಣ, ಹಣ ವಾಪಸ ಕೇಳಲು ಅಧಿಕಾರವಿಲ್ಲ ಅಂದರೆ ಸರಿಯಲ್ಲ. ಇದೇ ಕಾರಣಕ್ಕೆ ಹಣ ಕೊಟ್ಟಿದ್ದೇವೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ದಾವೆ ಊರ್ಜಿತವಾಗುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.